**ಪ್ರಸಾರವಾದ ಮತ್ತು ವಿತರಿಸಲಾದ ಶುಕ್ರವಾರದ ಪ್ರವಚನ (ಖುತ್ಬಾ)**

**ದಿನಾಂಕ: 8 ರಬೀವುಲ್ ಅವ್ವಲ್ 1448 ಹಿಜ್ರಿ / 21 ಆಗಸ್ಟ್ 2026**

## ವಿಷಯ: ಶರೀಅತಿನ ದೃಷ್ಟಿಯಲ್ಲಿ ಯಾವುದು ಸದಾಚಾರ ಮತ್ತು ಸಂಸ್ಕಾರ ಏನು?

# ಮೊದಲನೇ ಪ್ರವಚನ:

**ಸಕಲ ಸ್ತುತಿ ಸ್ತೋತ್ರಗಳು ಅಲ್ಲಾಹನಿಗೇ ಮೀಸಲು! ಅವನು ತನ್ನ ಜ್ಞಾನದಿಂದ ಸಮಸ್ತ ವಸ್ತುವನ್ನೂ ಆವರಿಸಿಕೊಂಡಿದ್ದಾನೆ, ಪ್ರತಿಯೊಂದನ್ನೂ ಅವನು ಅತ್ಯಂತ ಸುಂದರವಾಗಿ ಸೃಷ್ಟಿಸಿದ್ದಾನೆ, ತನ್ನ ದಾಸರಿಗೆ ವಿದ್ಯೆ ನೀಡಿ ಅತ್ಯುತ್ತಮವಾಗಿ ಸಂಸ್ಕರಿಸಿದ್ದಾನೆ. ಅವನು ಈ ಇಸ್ಲಾಂ ದೀನನ್ನು ಪೂರ್ಣ ಪ್ರಮಾಣದ ಜೀವನ ಧರ್ಮವನ್ನಾಗಿಸಿದ್ದಾನೆ; ಇದು ಜೀವನದ ಸಕಲ ವಿಷಯಗಳಲ್ಲೂ ಮಾರ್ಗದರ್ಶನ ಮಾಡುತ್ತದೆ. ಪ್ರತಿಯೊಂದು ಗುಣ ಮತ್ತು ಪ್ರತಿಯೊಂದು ಸ್ವಭಾವವನ್ನೂ ತಿದ್ದಿ ಸರಿ ಪಡಿಸುತ್ತದೆ.**

**ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದವರಾರೂ ಇಲ್ಲ, ಅವನು ಏಕದೇವನು ಮತ್ತು ಆತನಿಗೆ ಯಾವುದೇ ಪಾಲುದಾರರಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ. ಹಾಗೆಯೇ ಮುಹಮ್ಮದ್ (ﷺ) ಅವರು ಅಲ್ಲಾಹನ ದಾಸರಾಗಿದ್ದಾರೆ ಮತ್ತು ಅವನ ಪ್ರವಾದಿಯಾಗಿದ್ದಾರೆ ಎಂದೂ ಸಾಕ್ಷಿ ಹೇಳುತ್ತೇನೆ. ಅವರನ್ನು ಉನ್ನತ ನೈತಿಕ ಮೌಲ್ಯಗಳೊಂದಿಗೆ ಹಾಗೂ ಅತ್ಯುನ್ನತ ಶಿಷ್ಟಾಚಾರಗಳನ್ನು ಕಲಿಸಿಕೊಡುವುದಕ್ಕಾಗಿ ಕಳುಹಿಸಿಕೊಡಲಾಗಿದೆ. ಅಲ್ಲಾಹನು ಅವರ ಮೇಲೆಯೂ, ಅವರ ಕುಟುಂಬದವರ ಮೇಲೆಯೂ ಮತ್ತು ಅವರ ಅನುಯಾಯಿಗಳ ಮೇಲೆಯೂ ಅಪಾರ ಶಾಂತಿ ಮತ್ತು ಕೃಪೆಯನ್ನು ಸುರಿಸಲಿ.**

**ಓ ಅಲ್ಲಾಹನ ದಾಸರೇ! ನೀವು ಅಲ್ಲಾಹನಿಗೆ ಅಂಜಿರಿ. ಜನರು ಹಾಗೂ ರಾಷ್ಟ್ರಗಳು ಗುರುತಿಸಲ್ಪಡುವುದು ಅವುಗಳ ಅಪಾರ ಧನ, ಸಂಪತ್ತು ಅಥವಾ ಎತ್ತರದ ಕಟ್ಟಡಗಳಿಂದ ಅಲ್ಲ, ಬದಲಾಗಿ ಅವುಗಳ ಸದಾಚಾರ ಮತ್ತು ಸಂಸ್ಕಾರಗಳಿಂದ ಎಂದು ತಿಳಿದುಕೊಳ್ಳಿ.**

ಜನಾಂಗಗಳು ತಮ್ಮಲ್ಲಿ ಸದಾಚಾರವಿರುವವರೆಗೆ ಮಾತ್ರ ಜೀವಂತಿರುತ್ತವೆ, ಅವುಗಳ ನೈತಿಕತೆ ನಶಿಸಿದರೆ, ಆ ಜನಾಂಗಗಳೇ ನಾಶವಾಗಿ ಹೋಗುತ್ತವೆ.

ಮನುಷ್ಯನ ನಡವಳಿಕೆಯು ಅವನ ಹೃದಯದ ಕನ್ನಡಿಯಾಗಿದೆ; ಅವನ ಸೌಜನ್ಯವು ಅವನ ಅಂತರಂಗದ ಭಾಷೆಯಾಗಿದೆ.

ಕುರ್‌ಆನ್ ಹೇಳುತ್ತದೆ: "ಆ ದಿನದ ಕುರಿತು ಹುಷಾರಾಗಿರಿ, ಅಂದು ನಿಮ್ಮನ್ನು ಅಲ್ಲಾಹನ ಬಳಿಗೆ ಮರಳಿಸಲಾಗುವುದು. ಆ ಬಳಿಕ ಪ್ರತಿಯೊಂದು ಜೀವಕ್ಕೂ ಅದು ಮಾಡಿದ್ದನ್ನು ಒಪ್ಪಿಸಲಾಗುವುದು (ಅಂದು) ಅವರ ಮೇಲೆ (ಕಿಂಚಿತ್ತೂ) ಅನ್ಯಾಯವಾಗದು.” [ಸೂರಃ ಅಲ್-ಬಕರ: 281]

ಓ ಮುಸ್ಲಿಮರೇ: ಈ ಧರ್ಮದ (ಇಸ್ಲಾಂ) ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಇದು ಕೇವಲ ದೊಡ್ಡ ದೊಡ್ಡ ವಿಷಯಗಳ ಸುಧಾರಣೆಗೆ ಮಾತ್ರ ಸೀಮಿತವಾಗಿಲ್ಲ; ಬದಲಾಗಿ ಮಾನವನ ದೈನಂದಿನ ಸೂಕ್ಷ್ಮ ಅಭ್ಯಾಸಗಳು ಮತ್ತು ನಡವಳಿಕೆಗಳನ್ನು ಆಳವಾಗಿ ತಲುಪಿ, ಅವುಗಳನ್ನು ಅತ್ಯಂತ ಸುಂದರವಾಗಿ ರೂಪಿಸಿದೆ. ಪರಿಣಾಮವಾಗಿ ಮುಸ್ಲಿಮನ ಇಡೀ ಜೀವನವೇ, ಅರ್ಥಾತ್ ಅವನ ಆರಾಧನೆ, ವ್ಯವಹಾರ, ಮಾತು, ಆಹಾರ, ನಿದ್ರೆ ಮತ್ತು ಶೌಚಾಲಯದ ಶಿಷ್ಟಾಚಾರಗಳೂ ಸಂಸ್ಕಾರಮಯವಾಗಿದೆ.

ಸಲ್ಮಾನ್ (ರ) ಅವರಿಂದ ವರದಿಯಾಗಿದೆ: ಒಬ್ಬ ವ್ಯಕ್ತಿಯು ಸಲ್ಮಾನ್ (ರ) ಅವರಿಗೆ, "ನಿಮ್ಮ ಪ್ರವಾದಿಯವರು ನಿಮಗೆ ಶೌಚಾಲಯಕ್ಕೆ ಹೋಗುವ ವಿಧಾನದವರೆಗೆ ಎಲ್ಲವನ್ನೂ ಕಲಿಸಿಕೊಡುತ್ತಾರೆ ಎನ್ನಿಸುತ್ತದಲ್ಲವೇ!" ಎಂದನು. ಅದಕ್ಕೆ ಅವರು, "ಹೌದು, ಖಂಡಿತ! ನೀನು ಅದನ್ನು ಅಪಹಾಸ್ಯ ಮಾಡಿದರೂ ಸರಿ, ಶೌಚಾಲಯಕ್ಕೆ ಹೇಗೆ ಹೋಗಬೇಕೆಂದು ನಮಗೆ ಅವರು ಕಲಿಸಿದ್ದಾರೆ" ಎಂದರು. ಪ್ರವಾದಿಯವರು (ﷺ ): *"ನಮ್ಮಲ್ಲಿ ಯಾರೂ ಶೌಚಾಲಯದಲ್ಲಿ ಕುಳಿತಾಗ ಖಿಬ್ಲಾ ಕಡೆಗೆ ಮುಖ ಮಾಡುವುದಾಗಲಿ ಅಥವಾ ಬೆನ್ನು ಮಾಡುವುದಾಗಲಿ ಬಾರದು, ಬಲಗೈನಿಂದ ಶೌಚ ಕ್ರಿಯೆ ಮಾಡಬಾರದು, ಮಲ ಅಥವಾ ಮೂಳೆಗಳಿಂದ ಸ್ವಚ್ಛಗೊಳಿಸಬಾರದು ಮತ್ತು ಮೂರಕ್ಕಿಂತ ಕಡಿಮೆ ಕಲ್ಲುಗಳಿಂದ ಸ್ವಚ್ಛಗೊಳಿಸಬಾರದು"* ಎಂದು ನಮಗೆ ನಿಷೇಧಿಸಿದ್ದಾರೆ [ಸಹೀಹ್ ಮುಸ್ಲಿಮ್ ಮತ್ತು ಅಹ್ಮದ್].

ಹೇಗೆ ಕುಳಿತುಕೊಳ್ಳಬೇಕು, ಹೇಗೆ ಮಾತನಾಡಬೇಕು, ಅಷ್ಟೇಕೆ ಹೇಗೆ ಸೀನಬೇಕು, ಹೇಗೆ ಆಕಳಿಸಬೇಕು ಮತ್ತು ಇತರರಿಗೆ ತೊಂದರೆಯಾಗದಂತೆ ಹೇಗೆ ಇರಬೇಕು ಎಂದು ಕಲಿಸುವ ಧರ್ಮವಿದು! ಹೀಗಿರುವಾಗ ಇದಕ್ಕಿಂತ ಪೂರ್ಣ ಪ್ರಮಾಣದ ಮಾರ್ಗದರ್ಶನ ಮತ್ತು ಉತ್ತಮ ತರಬೇತಿ ಇನ್ನೊಂದಿರಲು ಸಾಧ್ಯವೇ?

ಅಲ್ಲಾಹನ ದಾಸರೇ: ಇಸ್ಲಾಂನಲ್ಲಿ ಶಿಷ್ಟಾಚಾರವೆಂಬುದು ಬರಿ ಬಾಹ್ಯ ಪ್ರದರ್ಶನವಲ್ಲ, ಬದಲಾಗಿ ಅದು ಆತ್ಮದ ಶುದ್ಧತೆಯನ್ನು ಅಳೆಯುವ ಒಂದು ಗೂಢ ಆರಾಧನೆಯಾಗಿದೆ. ಯಾರು ಈ ಸೂಕ್ಷ್ಮ ನಿಯಮಗಳನ್ನು ಪಾಲಿಸುತ್ತಾರೋ, ಅದು ಅವರ ಹೃದಯದ ಜೀವಂತಿಕೆ ಮತ್ತು ಸ್ವಭಾವದ ಸೌಜನ್ಯವನ್ನು ತೋರಿಸುತ್ತದೆ. ಯಾರು ಇವುಗಳನ್ನು ಅಲಕ್ಷಿಸುತ್ತಾರೋ, ಅದು ಅವರ ಅಂತರಂಗದ ಅಜ್ಞಾನ ಮತ್ತು ಕಠಿಣ ಸ್ವಭಾವವನ್ನು ಬಯಲುಗೊಳಿಸುತ್ತದೆ.

ಅದಕ್ಕಾಗಿಯೇ ಶರೀಅತ್ ದೈನಂದಿನ ಅಭ್ಯಾಸಗಳನ್ನು ತಿದ್ದಿಸರಿಪಡಿಸಲು ಬಂದಿದೆ. ಸೀನುವ ಶಿಷ್ಟಾಚಾರವೂ ಅವುಗಳಲ್ಲಿ ಒಂದಾಗಿದೆ. ಅಬೂ ಹುರೈರ (ರ) ಅವರಿಂದ ವರದಿಯಾಗಿದೆ, ಪ್ರವಾದಿಯವರು (ﷺ ) ಹೇಳಿದರು: "ಖಂಡಿತವಾಗಿಯೂ ಅಲ್ಲಾಹನು ಸೀನುವುದನ್ನು ಇಷ್ಟಪಡುತ್ತಾನೆ ಮತ್ತು ಆಕಳಿಸುವುದನ್ನು ದ್ವೇಷಿಸುತ್ತಾನೆ. ಆದ್ದರಿಂದ ಒಬ್ಬನು ಸೀನಿದ ನಂತರ 'ಅಲ್-ಹಮ್ದು ಲಿಲ್ಲಾಹ್' ಎಂದು ಹೇಳಿದರೆ, ಅದನ್ನು ಕೇಳಿದ ಪ್ರತಿಯೊಬ್ಬ ಮುಸ್ಲಿಮನ ಮೇಲೆಯೂ ಅವನಿಗೆ ಪ್ರತಿಯಾಗಿ ದುಆ (ಪ್ರಾರ್ಥನೆ) ಮಾಡುವುದು ಕರ್ತವ್ಯವಾಗುತ್ತದೆ"* [ಸಹೀಹ್ ಬುಖಾರಿ ಮತ್ತು ಮುಸ್ಲಿಮ್].

ನೋಡಿ! ಇಸ್ಲಾಂ ಹೇಗೆ ಸೀನುವನಂತಹ ತಹ ಸರಳ ಪ್ರಕ್ರಿಯೆಯನ್ನು ಅಲ್ಲಾಹನ ಸ್ಮರಣೆಯನ್ನಾಗಿ ಮತ್ತು ಜನರ ನಡುವಿನ ಪ್ರೀತಿ-ಕರುಣೆಯ ಸಂಕೇತವನ್ನಾಗಿ ಮಾಡಿದೆ! ಸೀನಿದವನು 'ಅಲ್-ಹಮ್ದು ಲಿಲ್ಲಾಹ್' (ಅಲ್ಲಾಹನಿಗೆ ಸಕಲ ಪ್ರಶಂಸೆಗಳು) ಎಂದರೆ, ಕೇಳಿದವನು 'ಯರ್ಹಮುಕಲ್ಲಾಹ್' (ಅಲ್ಲಾಹನು ನಿನಗೆ ಕರುಣೆ ತೋರಲಿ) ಎನ್ನುತ್ತಾನೆ. ಪ್ರತಿಯಾಗಿ ಸೀನಿದವನು 'ಯಹ್ದೀಕುಮುಲ್ಲಾಹ್ ವ ಯುಸ್ಲಿಹು ಬಾಲಕುಮ್' (ಅಲ್ಲಾಹನು ನಿಮಗೂ ಸನ್ಮಾರ್ಗ ತೋರಲಿ ಮತ್ತು ನಿಮ್ಮ ಸ್ಥಿತಿಯನ್ನು ಸುಧಾರಿಸಲಿ) ಎನ್ನುತ್ತಾನೆ. ಇವು ಚಿಕ್ಕ ಪದಗಳಾದರೂ, ಬಾಂಧವ್ಯವನ್ನು ಗಟ್ಟಿಗೊಳಿಸುತ್ತವೆ.

ಅದೇ ರೀತಿ, ಸೀನುವಾಗ ಧ್ವನಿಯನ್ನು ತಗ್ಗಿಸುವುದು ಮತ್ತು ಬಾಯಿಯನ್ನು ಮುಚ್ಚಿಕೊಳ್ಳುವುದು ಅತ್ಯಗತ್ಯ. ಪ್ರವಾದಿಯವರು (ﷺ) ಸೀನುವಾಗ ತಮ್ಮ ಮುಖವನ್ನು ಕೈಯಿಂದ ಅಥವಾ ಬಟ್ಟೆಯಿಂದ ಮುಚ್ಚಿಕೊಳ್ಳುತ್ತಿದ್ದರು ಮತ್ತು ಧ್ವನಿಯನ್ನು ತಗ್ಗಿಸುತ್ತಿದ್ದರು [ತಿರ್ಮಿಧಿ].

ವಿಶ್ವಾಸಿಗಳೇ: ಈ ಪೈಕಿ ಮತ್ತೊಂದು ಶಿಷ್ಟಾಚಾರ ಆಕಳಿಸುವುದಕ್ಕೆ ಸಂಬಂಧಿಸಿದ್ದಾಗಿದೆ. ಪ್ರವಾದಿಯವರು (ﷺ) ಹೇಳಿದರು: "ಆಕಳಿಕೆ ಶೈತಾನನ ಕಡೆಯಿಂದ ಬರುತ್ತದೆ. ಆದ್ದರಿಂದ ನಿಮ್ಮಲ್ಲಿ ಯಾರಾದರೂ ಆಕಳಿಸಿದರೆ, ಅದನ್ನು ಸಾಧ್ಯವಿದ್ದಷ್ಟು ತಡೆಯಿರಿ. ಏಕೆಂದರೆ ಆಕಳಿಸುವಾಗ 'ಆಹ್' ಎಂದು ಶಬ್ದ ಮಾಡಿದರೆ ಶೈತಾನನು ನಗುತ್ತಾನೆ" [ಸಹೀಹ್ ಬುಖಾರಿ ಮತ್ತು ಮುಸ್ಲಿಮ್]. ಆಕಳಿಕೆಯನ್ನು ಶೈತಾನನೊಂದಿಗೆ ಜೋಡಿಸಲು ಕಾರಣವೆಂದರೆ, ಅದು ಸೋಮಾರಿ ಮತ್ತು ಆಲಸ್ಯತನದ ಸಂಕೇತವಾಗಿದೆ; ಆದರೆ ಸೀನುವಿಕೆ ಚುರುಕುತನದ ಸಂಕೇತವಾಗಿದೆ.

ಹಾಗೆಯೇ ಇನ್ನೊಂದು ಮುಖ್ಯ ಶಿಷ್ಟಾಚಾರ ತೇಗುವಿಕೆಗೆ ಸಂಬಂಧಿಸಿದ್ದು. ತೇಗು ಎಂದರೆ ಹೊಟ್ಟೆಯಿಂದ ಬಾಯಿಯ ಮೂಲಕ ಗಾಳಿ ಬರುವುದು. ಇದು ಹೆಚ್ಚಾಗಿ ಹೊಟ್ಟೆ ತುಂಬಾ ತಿಂದಾಗ ಸಂಭವಿಸುತ್ತದೆ. ಇತರರ ಮುಂದೆ ಗಟ್ಟಿಯಾಗಿ ತೇಗಿ ಶಬ್ದ ಮಾಡುವುದು ಅಸಭ್ಯತೆಯಾಗಿದೆ. ಒಬ್ಬ ವ್ಯಕ್ತಿಯು ಪ್ರವಾದಿಯವರ (ﷺ) ಮುಂದೆ ತೇಗಿದಾಗ, ಪ್ರವಾದಿಯವರು: "ನಿನ್ನ ತೇಗುವಿಕೆಯನ್ನು ನಮ್ಮಿಂದ ದೂರವಿಡು (ಅಂದರೆ ಶಬ್ದ ಮಾಡಬೇಡ)" ಎಂದರು [ತಿರ್ಮಿಧಿ].

ಇಲ್ಲಿ ಪ್ರವಾದಿಯವರು ಅದರ ಮೂಲ ಕಾರಣವಾದ 'ಅತಿಯಾಗಿ ತಿನ್ನುವುದನ್ನು' ನಿಯಂತ್ರಿಸಲು ಸೂಚಿಸಿದರು. ಪ್ರವಾದಿಯವರು (ﷺ) ಹೇಳಿದರು: "ಮನುಷ್ಯನು ತನ್ನ ಹೊಟ್ಟೆಗಿಂತ ಕೆಟ್ಟದಾದ ಯಾವುದೇ ಪಾತ್ರೆಯನ್ನು ತುಂಬಿಸಿಲ್ಲ. ಮನುಷ್ಯನಿಗೆ ಅವನ ಬೆನ್ನುಮೂಳೆಯನ್ನು ನೆಟ್ಟಗೆ ಇಡಲು ಒಂದಲ್ಪ ತುತ್ತು ಆಹಾರವೇ ಸಾಕು. ಇನ್ನು ಅನಿವಾರ್ಯವಾದರೆ, ಮೂರರಲ್ಲಿ ಒಂದಂಶ ಆಹಾರಕ್ಕೆ, ಒಂದಂಶ ನೀರಿಗೆ ಮತ್ತು ಒಂದಂಶ ಉಸಿರಾಟಕ್ಕೆ ಮೀಸಲಿಡಲಿ" [ತಿರ್ಮಿಧಿ]. ಅರಬ್ಬರಲ್ಲಿ ಒಂದು ಗಾದೆಯಿದೆ: "ಹೊಟ್ಟೆ ತುಂಬಿದರೆ, ಬುದ್ಧಿ ಮಂದವಾಗುತ್ತದೆ."

ನಾನು ಈ ಮಾತುಗಳನ್ನು ಹೇಳುತ್ತಾ, ನನ್ನ ಪರವಾಗಿ, ನಿಮ್ಮ ಪರವಾಗಿ ಮತ್ತು ಎಲ್ಲಾ ಮುಸ್ಲಿಮರ ಪರವಾಗಿ ಅಲ್ಲಾಹನಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ.

## ಎರಡನೇ ಪ್ರವಚನ:

ಸಕಲ ಪ್ರಶಂಸೆಗಳೂ  ಅಲ್ಲಾಹನಿಗೇ ಸಲ್ಲಬೇಕು. ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದವರಾರೂ ಇಲ್ಲ ಮತ್ತು ಮುಹಮ್ಮದ್ (ﷺ) ಅವರು ಅಲ್ಲಾಹನ ದಾಸ ಹಾಗೂ ಪ್ರವಾದಿಯಾಗಿದ್ದಾರೆ ಎಂದು ಸಾಕ್ಷಿ ಹೇಳುತ್ತೇನೆ.

ಓ ಅಲ್ಲಾಹನ ದಾಸರೇ! ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲೇ ಅಂಜಿರಿ, ರಹಸ್ಯದಲ್ಲೂ ಬಹಿರಂಗದಲ್ಲೂ ಆತನನ್ನು ನೆನಪಿಸಿಕೊಳ್ಳಿ. ನೀವೆಲ್ಲರೂ ಆತನ ಬಳಿಗೇ ಮರಳಬೇಕಾಗಿದೆ ಎಂಬುದನ್ನು ನೆನಪಿಡಿ.

ಆತ್ಮೀಯರೇ: ಸಾಮಾನ್ಯವಾಗಿ ಈ ಆದರ್ಶಗಳನ್ನು ಪಾಲಿಸಲು ಅಲ್ಲಾಹನ ಭವನವಾದ ಮಸೀದಿಗಳು ಹೆಚ್ಚು ಅರ್ಹವಾಗಿವೆ. ಏಕೆಂದರೆ ಮಸೀದಿಗೆ ತನ್ನದೇ ಆದ ಪವಿತ್ರತೆ ಮತ್ತು ಗೌರವವಿದೆ.

ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: "ಯಾವ ಭವನಗಳನ್ನು ಉನ್ನತ ದರ್ಜೆಗೇರಿಸಬೇಕೆಂದು ಮತ್ತು ತನ್ನ ನಾಮವನ್ನು ಸ್ಮರಿಸಬೇಕೆಂದು ಅಲ್ಲಾಹನು ಆಜ್ಞಾಪಿಸಿದ್ದಾನೋ, ಆ ಮಸೀದಿಗಳಲ್ಲಿ ಮುಂಜಾವು ಮುಸ್ಸಂಜೆ ಎನ್ನದೆ ಆತನ ಪವಿತ್ರತೆಯನ್ನು ಕೊಂಡಾಡುವ ಕೆಲ ಜನರಿದ್ದಾರೆ. ಅವರನ್ನು ವ್ಯಾಪಾರವಾಗಲಿ, ಕ್ರಯ-ವಿಕ್ರಯವಾಗಲಿ ಅಲ್ಲಾಹನ ಸ್ಮರಣೆಯಿಂದಲೋ, ನಮಾಝ್ ಸಂಸ್ಥಾಪಿಸುವುದರಿಂದಲೋ ಮತ್ತು ಝಕಾತ್ ನೀಡುವುದರಿಂದಲೋ ವಿಚಲಿತಗೊಳಿಸುವುದಿಲ್ಲ." [ಸೂರಃ ಅನ್-ನೂರ್: 36-37]

ಆದರೆ ಇಂದು ಮಸೀದಿಗಳಲ್ಲಿ ಸೀನುವಿಕೆ, ಆಕಳಿಕೆ ಮತ್ತು ತೇಗುವಿಕೆಯನ್ನು ಯಾವುದೇ ನಿಯಂತ್ರಣವಿಲ್ಲದೆ, ಶಬ್ದ ಮಾಡುತ್ತಾ ಮಾಡುವುದನ್ನು ಕಾಣುತ್ತೇವೆ! ಮಸೀದಿ ಎಂದರೆ ಮನಸ್ಸು ಮತ್ತು ದೇಹ ಶಾಂತವಾಗಿರಬೇಕಾದ ಸ್ಥಳ. ಮನುಷ್ಯರ ಸಭೆಗಳಲ್ಲೇ ಸೌಜನ್ಯ ತೋರಿಸುವಾಗ, ಸೃಷ್ಟಿಕರ್ತನ ಭವನದಲ್ಲಿ ಸಂಸ್ಕಾರ ಬೇಡವೇ!?

ಅಬೂ ಸಈದ್ ಅಲ್-ಖುದ್ರಿ (ರ) ಅವರಿಂದ ವರದಿಯಾಗಿದೆ, ಪ್ರವಾದಿಯವರು (ﷺ) ಹೇಳಿದರು: "ಅರಿಯಿರಿ, ನೀವೆಲ್ಲರೂ ನಿಮ್ಮ ಒಡೆಯನೊಂದಿಗೆ ಸಂಭಾಷಿಸುತ್ತಿದ್ದೀರಿ. ಆದ್ದರಿಂದ ಪರಸ್ಪರರನ್ನು ಪೀಡಿಸಬೇಡಿ ಮತ್ತು ಕುರಾನ್ ಓದುವಾಗ ಧ್ವನಿಯನ್ನು ಎತ್ತರಿಸಬೇಡಿ" [ಅಬೂ ದಾವೂದ್].

ಮಸೀದಿಯಲ್ಲಿ ಸಣ್ಣ ಶಬ್ದವನ್ನೂ ತಡೆಯಲಾಗುತ್ತಿತ್ತು. ಉಮರ್ (ರ) ಅವರ ಆಡಳಿತಾವಧಿಯಲ್ಲಿ ಮಸೀದಿಯಲ್ಲಿ ಗಟ್ಟಿಯಾಗಿ ಮಾತನಾಡುತ್ತಿದ್ದ ಇಬ್ಬರನ್ನು ಕರೆಸಿ, "ನೀವು ಎಲ್ಲಿಂದ ಬಂದಿದ್ದೀರಿ?" ಎಂದು ಕೇಳಿದರು. ಅವರು "ತಾಇಫ್‌ನಿಂದ" ಎಂದಾಗ, ಉಮರ್ (ರ): "ನೀವು ಈ ನಗರದವರಾಗಿದ್ದರೆ ನಿಮಗೆ ಶಿಕ್ಷೆ ನೀಡುತ್ತಿದ್ದೆ, ಪ್ರವಾದಿಯವರ ಮಸೀದಿಯಲ್ಲಿ ಧ್ವನಿ ಎತ್ತಿ ಮಾತನಾಡುತ್ತೀರಲ್ಲಾ!" ಎಂದು ಗದರಿಸಿದರು [ಸಹೀಹ್ ಬುಖಾರಿ].

ಅಲ್ಲಾಹನ ದಾಸರೇ: ಈ ಸಣ್ಣ ಪುಟ್ಟ ವಿಷಯಗಳಲ್ಲೂ ಶಿಷ್ಟಾಚಾರ ಪಾಲಿಸುವುದು ಉತ್ತಮ ಸಂಸ್ಕಾರದ ಕುರುಹಾಗಿದೆ. ಮುಸ್ಲಿಮನು ತನಗಾಗಿ ಮಾತ್ರ ಜೀವಿಸುವುದಿಲ್ಲ, ಇತರರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಾನೆ. ಪ್ರವಾದಿಯವರು (ﷺ) ಹೇಳಿದರು: "ಯಾರ ನಾಲಿಗೆ ಮತ್ತು ಕೈಗಳಿಂದ ಇತರ ಮುಸ್ಲಿಮರು ಸುರಕ್ಷಿತವಾಗಿರುತ್ತಾರೋ ಅವನಷ್ಟೇ ನಿಜವಾದ ಮುಸ್ಲಿಮ್" [ಸಹೀಹ್ ಬುಖಾರಿ].

ಯಾ ಅಲ್ಲಾಹ್! ಇಸ್ಲಾಂ ಮತ್ತು ಮುಸ್ಲಿಮರಿಗೆ ಗೌರವದ ಬದುಕು ಕರುಣಿಸು. ಜೀವಂತವಿರುವ ಮತ್ತು ಮರಣ ಹೊಂದಿದ ಸಮಸ್ತ ಮುಸ್ಲಿಮರನ್ನು ಕ್ಷಮಿಸು. ನಮ್ಮ ನಾಯಕರನ್ನು ನಿನಗೆ ಇಷ್ಟವಾಗುವ ಕಾರ್ಯಗಳನ್ನು ಮಾಡಲು ಮಾರ್ಗದರ್ಶನ ಮಾಡು. ನಮ್ಮ ನಾಡನ್ನು ಮತ್ತು ಸಮಸ್ತ ಮುಸ್ಲಿಮ್ ರಾಷ್ಟ್ರಗಳನ್ನು ಶಾಂತಿ, ಸಮೃದ್ಧಿ ಮತ್ತು ಅಭಿವೃದ್ಧಿಯಿಂದ ತಾಣವನ್ನಾಗಿಸು. ಆಮೀನ್!